ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೮೧೯ (೨೧೬೨)

ಸದಸ್ಯರ ಹೆಸರು : ಶ್ರೀ ಧ್ರುವನಾರಾಯಣ (ಸಂತೇಮರಳ್ಳಿ)

ಉತ್ತರಿಸುವವರು : ಶ್ರೀ ಸಿ ಚನ್ನಿಗಪ್ಪ (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಪ್ರಶ್ನೆ

ಅ) ರಾಜ್ಯದಲ್ಲಿ ಅದರಲ್ಲೂ ಮುಖ್ಯವಾಗಿ ಚಾಮರಾಜನಗರ ಜಿಲ್ಲೆಗಳಲ್ಲಿರುವ ಆನೆಗಳ ಒಟ್ಟು ಸಂಖ್ಯೆ ಎಷ್ಟು ; (ಜಿಲ್ಲಾವಾರು ಅಂಕಿ ಅಂಶ ನೀಡುವುದು) ;

ಆ) ಈ ಎಲ್ಲಾ ಆನೆಗಳ ನಿರ್ವಹಣೆಗೆ ಸರ್ಕಾರ ಕೈಗೊಂಡ ಯೋಜನೆಗಳೇನು ಹಾಗೂ ನಿಗದಿಗೊಳಿಸಿರುವ ಹಣವೆಷ್ಟು ;

ಇ) ನಿರಂತರವಾಗಿ ನಡೆಯುತ್ತಿರುವ ಆನೆ (ಹಾವಳಿ) ಗಳಿಂದ ರೈತರ ಬೆಳೆ ಮತ್ತು ಜೀವಹಾನಿ ಹಾಗೂ ಹಾನಿಗೊಳಗಾದ ರೈತರುಗಳಿಂದ ಆನೆಗಳ ಮೇಲೆ ಆಗುತ್ತಿರುವ ಜೀವಹನಿಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಆನೆ ಮತ್ತು ಮಾನವ ಸಂಘರ್ಷಗಳನ್ನು ನಿಯಂತ್ರಿಸಲು ಸರ್ಕಾರ ಅನುಸರಿಸುತ್ತಿರುವ ಕ್ರಮಗಳೇನು ;

ಉತ್ತರ

ಅ) ೨೦೦೫-೦೬ ನೇ ಸಾಲಿನ ಆನೆಗಣತಿಯ ಪ್ರಕಾರ ರಾಜ್ಯದಲ್ಲಿರುವ ಆನೆಗಳ ಸಂಖ್ಯೆ ೪೪೨೮ ಈ ಪೈಕಿ ಬಂಡೀಪುರ, ಚಾಮರಾಜನಗರ (ಬಿ.ಆರ್.ಟಿ.) ಮತ್ತು ಕೊಳ್ಳೇಗಾಲಗಳನ್ನು ಒಳಗೊಂಡಂತೆ ಚಾಮರಾಜನಗರ ಜಿಲ್ಲೆಯಲ್ಲಿ ಸರಾಸರಿ ಆನೆಗಳ ಸಂಖ್ಯೆ : ೧೮೨೧.

ಜಿಲ್ಲಾವಾರು ಅಂಕಿ ಅಂಶ ಕ್ರೋಢೀಕರಿಸಿಲ್ಲ ಆದರೆ ವಿಭಾಗವಾರು ಅಂಕಿ ಅಂಶ ಈ ಕೆಳಗಿನಂತಿದೆ.

ಕ್ರ.ಸಂ	ವಿಭಾಗ	ಒಟ್ಟು ಸಂಖ್ಯೆ
೧	ಬಂಡಿಪುರ	೧೨೧೭
೨	ನಾಗರಹೊಳೆ	೮೦೪
೩	ಭದ್ರಾ ವನ್ಯಜೀವಿ	೫೩೪
೪	ಚಾಮರಾಜನಗರ (ಬಿಆರ್‌ಟಿ)	೪೬೭
೫	ವಿರಾಜಪೇಟೆ	೪೪೭
೬	ಕಾವೇರಿ ವನ್ಯಜೀವಿ	೪೩೬
೭	ಕೊಳ್ಳೇಗಾಲ	೧೩೭
೮	ಮಡಿಕೇರಿ	೭೫
೯	ಬನ್ನೇರುಘಟ್ಟ*	೭೪
೧೦	ಹುಣಸೂರು	೫೧
೧೧	ಮಡಿಕೇರಿ	೬೩
೧೨	ಹಾಸನ	೪೨
೧೩	ಬೆಂಗಳೂರು	೨೯
೧೪	ಮೈಸೂರು	೧೭
೧೫	ಬ್ರಹ್ಮಗಿರಿ	೧೦
೧೬	ಚಿಕ್ಕಮಗಳೂರು	೮
೧೭	ಮಂಡ್ಯ	೮
೧೮	ದಾಂಡೇಲಿ	೫
೧೯	ಬೆಳಗಾವಿ	೨
೨೦	ಕಾರವಾರ	೨
೨೧	ಶಿವಮೊಗ್ಗ	೧
	ಒಟ್ಟು	೪೪೨೮

ಆ) ರಾಜ್ಯದಲ್ಲಿರುವ ಕಾಡಾನೆಗಳ ರಕ್ಷಣೆ ಮತ್ತು ಸಂರಕ್ಷಣೆಗೆ ಕರ್ನಾಟಕದಲ್ಲಿ ಕೇಂದ್ರ ಪುರಸ್ಕೃತವಾದ ಆನೆ ಯೋಜನೆಯನ್ನು ಮುಖ್ಯವಾಗಿ ಜಾರಿಗೊಳಿಸಲಾಗುತ್ತಿದೆ.

ನೀರಿನ ಸೌಕರ್ಯವನ್ನು ಒದಗಿಸಿ ಮತ್ತು ಹಣ್ಣು ಹಂಪಲುಗಳನ್ನು ಬೆಳೆಸಿ ಪ್ರಾಣಿಗಳ ಆವಾಸ ಸ್ಥಾನವನ್ನು ಅಭಿವೃದ್ಧಿಗೊಳಿಸುವುದು. ಸುಧಾರಿತ ಸಂಪರ್ಕಸಾಧನ ಮತ್ತು ಯುದ್ದ ಸಲಕರಣೆಗಳು ಮತ್ತು ಎರವಲು ಪಡೆ ಮತ್ತು ಕಳ್ಳಬೇಡೆ ತಡೆ ಶಿಬಿರಗಳ ಮೂಲಕ ಒತ್ತಡವನ್ನು ಕಡಿತಗೊಳಿಸಲು ಬದಲಿ ವ್ಯವಸ್ಥೆಯ ಮೂಲಕ ಪರಿಸರ ಅಭಿವೃದ್ಧಿ, ಆನೆ ಕಂದನಗಳು ಸೋಲಾರ್ ಅಥವಾ ಬ್ಯಾಟರಿ ಪವರ್ ಬೇಲಿ, ರಬ್ಬರ್ ಗೋಡೆ ನಿರ್ಮಾಣ, ಕಾರಿಡಾರ್ ನಿರ್ಮಾಣದ ಮೂಲಕ ಮಾನ್ ಹಾಗೂ ಆನೆಗಳ ಮಧ್ಯೆ ಇರುವ ಸಂಘರ್ಷ ಕಡಿಮೆ ಮಾಡುವುದು. ವನ್ಯಪ್ರಾಣಿಗಳಿಂದಾಗುವ ಮಾನವ ಜೀವ ಹಾನಿ, ಬೆಳೆಗಳ ನಾಶ ನಷ್ಟಕ್ಕೆ ಪರಿಹಾರ ನೀಡುವುದು. ಲಗ್ತ ಇರುವ ಗ್ರಾಮಸ್ಥರಿಗೆ ಶಿಕ್ಷಣ ಮತ್ತು ತರಬೇತಿ ಮೇಲ್ಕಂಡ ಆನೆಗಳ ನಿರ್ವಹಣೆಗೆ ೨೦೦೬-೦೭ ನೇ ಸಾಲಿನಲ್ಲಿ ಈ ಕೆಳಕಂಡ ಯೋಜನೆಗಳಲ್ಲಿ ಹಣವನ್ನು ನಿಗದಿ ಪಡಿಸಲಾಗಿದೆ.

ಯೋಜನೆಯ ವಿವರ	ನಿಗದಿ ಪಡಿಸಿರುವ ಮೊತ್ತ
ಕೇಂದ್ರ ಪುರಸ್ಕೃತ ಆನೆ ಯೋಜನೆರೂ.	೧೬೭.೮೨ ಲಕ್ಷ

ಇ) ಹೌದು

ಈ) ರಾಜ್ಯದಲ್ಲಿ ಆನೆ ಮತ್ತು ಮಾನವ ಸಂಘರ್ಷಗಳನ್ನು ನಿಯಂತ್ರಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

೧. ಸ್ಥಳೀಯ ಜನರಲ್ಲಿ ಕಾಡಿನಲ್ಲಿ ಜರುಗಬಹುದಾದ ವನ್ಯಜೀವಿ ಅಪರಾಧಗಳನ್ನು ತಪ್ಪಿಸುವ ಬಗ್ಗೆ ಅರಿವನ್ನು ಮೂಡಿಸುವ ಮೂಲಕ ಅವರ ಸಹಕಾರ ಪಡೆದು ವನ್ಯಜೀವಿ ಅಪರಾದಗಳನ್ನು ತೆಡೆಗಟ್ಟುವುದು.

೨. ಅರಕ್ಷಕ ಇಲಾಖೆ – ಅರಣ್ಯ ಇಲಾಖೆಗಳ ಮಧ್ಯ ಸಹಕಾರ ಮತ್ತು ಉತ್ತಮ ಸೌಹಾರ್ದ ಸಂಪರ್ಕ ಬೆಳೆಸಿ ಕಾಡಿನಲ್ಲಿ ಜರುಗಬಹುದಾದ ವನ್ಯಜೀವಿ ಅಪರಾದಗಳನ್ನು ತಡೆಗಟ್ಟುವುದು.

೩. ಅರಣ್ಯದ ಅಂಚಿನ ಸೂಕ್ಷ ಪ್ರದೇಶಗಳನ್ನು ಗುರ್ತಿಸಿ ಅಲ್ಲಿನ ಬುಡಕಟ್ಟು ಜನರನ್ನು ವಾಚರುಗಳನ್ನಾಗಿ ನೇಮಿಸಿ ಕಳ್ಳಬೇಟೆ ತಡೆ ಶಿಬಿರಗಳನ್ನು ನಿರ್ಮಿಸುವುದು.

೪. ನಡೆಯಬಹುದಾದ ವನ್ಯಜೀವಿ ಅಪರಾಧಗಳನ್ನು ಕಂಡುಹಿಡಿದು ವಿವರಗಳನ್ನು ಇಲಾಖೆಗೆ ತಿಳಿಸುವ ಬಾತ್ಮೀದಾರರು / ಮಾಹಿತಿದಾರರು/ ಜಾಗೃತ ವ್ಯವಸ್ಥೆಗಳನ್ನು ಅಳವಡಿಸುವುದು.

೫. ಕಾಡಾನೆಗಳ ಹಾವಳಿ ಇರುವ ಸ್ಥಳಗಳಲ್ಲಿ ಅರಣ್ಯ ಪ್ರದೇಶಗಳ ಅಂಚಿನಲ್ಲಿ ಎಲಾಖೆ ಸಿಬ್ಬಂದಿಗಳನ್ನು ದಿನದ ೨೪ ಘಂಟೆಗಳಲ್ಲೂ ವ್ಯವಸ್ಥಿತವಾಗಿ ಕಾವಲು ಕಾಯಲು ನೇಮಿಸಲಾಗಿದೆ ಮತ್ತು ಅವ್ಯವಸ್ಥೆಯನ್ನು ಸೂಕ್ತ ಮೇಲಾಧಿಕಾರಿಗಳಿಂದ ಮೇಲ್ವಿಚಾರಣೆ ಮಾಡಲಾಗುವುದು.

೬. ಕಾಲುನಡಿಗೆ / ವಾಹನ / ಸಾಕಾನೆಗಳಿಂದ, ಕಾಡಾನೆಗಳ ಓಡಾಟವನ್ನು ದಿನನಿತ್ಯ ಗಮನಿಸಿ ದಾಖಲಿಸುವುದು.

೭. ಸ್ಥಳೀಯ ಆನೆ ಓಡಿಸಲು ವಾಚರುಗಳ ಸಹಾಯದಿಂದ ಕಾಡಿನಿಂದ ಹೊರಬಂದ ಕಾಡಾನೆಗಳನ್ನು ಕಾಡಿನೊಳಗೆ ಓಡಿಸಲು ಕ್ರಮ ತೆಗೆದುಕೊಳ್ಳುವುದು.

೮. ಕಾಡಾನೆಗಳ ಹಾವಳಿ ಅಧಿಕವಾಗಿರುವ ಸೂಕ್ಷ್ಮ ಸ್ಥಳಗಳಲ್ಲಿ ಅರಣ್ಯ ಪ್ರದೇಶದ ಅಂಚಿನಲ್ಲಿ ಆನೆ ಕಡೆ ಕಂದಕಗಳ ನಿರ್ಮಾಣ ಮಾಡುವುದು.

೯. ಕಾಡಾನೆಗಳ ಹಾವಳಿ ಇರುವ ಸ್ಥಳಗಳಲ್ಲಿ ಅರಣ್ಯ ಪ್ರದೇಶದ ಅಂಚಿನಲ್ಲಿ ಸೌರಶಕ್ತಿ ಬೇಲಿ ನಿರ್ಮಾಣ ಮಾಡುವುದು.

೧೦. ಕಾಡಾನೆ ಹಾವಳಿ, ಆಗುವ ನಷ್ಟ ಮತ್ತು ಅವುಗಳನ್ನು ನಿಯಂತ್ರಿಸಲು ಹಾಗೂ ಕಾಡಾನೆಗಳನ್ನು ಓಡಿಸಲು ತಾತ್ಕಾಲಿಕ ವಾಚರುಗಳನ್ನು ನೇಮಿಸುವುದು.

೧೧. ವನ್ಯಪ್ರಾಣಿಗಳಿಗಾಗಿ ಅರಣ್ಯ ಪ್ರದೇಶಗಳ ಒಳಗೆ ನೀರಿನ ಸೌಕರ್ಯವನ್ನು ಒದಗಿಸಿ, ಹಣ್ಣು ಹಂಪಲುಗಳನ್ನು ಬೆಳೆಸಿ ಪ್ರಾಣಿಗಳ ಆವಾಸ ಸ್ಥಾನವನ್ನು ಅಭಿವೃದ್ಧಿಗೊಳಿಸುವುದು.

೧೨. ಅರಣ್ಯ ಪ್ರದೇಶಗಳಲ್ಲಿ ಕಾಡಾನೆಗಳಿಗೆ ವರ್ಷವಿಡೀ ಕುಡಿಯುವ ನೀರು ದೊರಕುವಂತೆ ಅರಣ್ಯದಲ್ಲಿರುವ ಕೆರೆಗಳ ಹೂಳುತೆಗೆಯುವುದು.

೧೩. ಸಾರ್ವಜನಿಕರ ಆಸ್ತಿ ಪಾಸ್ತಿಗಳಿಗೆ ಹಾಗೂ ಮಾನವ ಸಾವಿಗೆ ಕಾರಣವಾಗಿರುವ ಪುಮಡ ಕಾಡಾನೆಗಳನ್ನು ಹಾಗೂ ಇತರ ವನ್ಯಪ್ರಾಣಿಗಳನ್ನು ಗುರುತಿಸಿ ಅವುಗಳನ್ನು ಹಿಡಿಯುವುದು.

ಮೇಲಿನ ಎಲ್ಲಾ ಕೆಲಸಗಳಿಗೆ ಈಗಿನಂತೆ ಕಳೆದ ೧೦ ವರ್ಷಗಳಲ್ಲಿ ೪೧೫.೧೦೨ ಕಿ.ಮೀ. ಆನೆತಡೆ ಕಂದಕ ೪೧೦.೧೯ ಸೌರಶಕ್ತಿ ಬೇಲಿ ಮಾಡಿ ಮುಗಿಸಲಾಗಿದೆ. ೨೦೦೬-೦೭ನೇ ಸಾಲಿನಲ್ಲಿ ಮೈಸೂರು / ಚಾಮರಾಜನಗರ / ಬೆಂಗಳೂರು / ಕೊಡಗು/ ಹಾಸನ/ಉತ್ತರ ಕನ್ನಡ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಮಾನವ – ಆನೆ ಸಂಘರ್ಷವನ್ನು ಕಡಿಮೆ ಮಾಡಲು ಆನೆ ತಡೆ ಕಂದಕ, ಸೌರಶಕ್ತಿ ಬೇಲಿ/ಆನೆತಡೆ ಗೋಡೆಗಳನ್ನು ಮಾಡಲು ರೂ. ೬೦೦ ಲಕ್ಷ ಅನುದಾನವನ್ನು ನೀಡಿದೆ.

ಅಲ್ಲದೆ ಜೆ.ಬಿ.ಐ.ಸಿ. ಯೋಜನೆಯಡಿಯಲ್ಲಿ ಬಂಡೀಪುರ ರಾಷ್ಟ್ರೀಯ ಉದ್ಯಾನವನದಲ್ಲಿ ಮೇಲಿನ ಕೆಲಸಗಳನ್ನು ಹಮ್ಮಿಕೊಳ್ಳಲು ರೂ.೪೮.೪೭ ಲಕ್ಷಗಳ ಅನುದಾನವನ್ನು ನೀಡಿದೆ.

೧೪. ಆನೆ ಮತ್ತು ಮಾನವ ಸಂಘರ್ಷದಲ್ಲಿ ಆಗಿರುವ ಮಾನವ ಜೀವ ಹಾನಿ ಮತ್ತು ಬೆಳೆ ಪರಿಹಾರವನ್ನು ಸಕಾಲದಲ್ಲಿ ಪಾವತಿಸಿದೆ. ಈ ಉದ್ದೇಶಕ್ಕಾಗಿ ಯೋಜನೇತರ – ೦೧೫– ಪೂರಕ ವೆಚ್ಚಗಳು ಇದರಡಿ ರೂ. ೧೪೮.೫೧ ಲಕ್ಷಗಳನ್ನು ೨೦೦೬-೦೭ನೇ ಸಾಲಿನಲ್ಲಿ ಖರ್ಚು ಮಾಡಲಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೮೨೦ (೨೪೩೧)

ಸದಸ್ಯರ ಹೆಸರು : ಶ್ರೀ ಗೋಪಾಲಕೃಷ್ಣ ಬೇಳೂರು ಬಿ.ಕೆ (ಸಾಗರ)

ಉತ್ತರಿಸುವವರು : ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಮಂತ್ರಿಗಳು)

ಪ್ರಶ್ನೆ

ಅ) ಸಾಗರದ ತಾಲ್ಲೂಕು ಕಛೇರಿಯಲ್ಲಿ ಖಾಲಿ ಇರುವ ಶಿರಸ್ತೇದಾರರು ಹಾಗೂ ಗ್ರಾಮ ಲೆಕ್ಕಿಗರ ಹುದ್ದೆ ಎಷ್ಟು (ಹುದ್ದೆವಾರು ವಿವರ ನೀಡುವುದು) ;